ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ಶೈವಿ/06/ಸುತ್ತೋಲೆ/2020-21

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-01
ದಿನಾಂಕ: 13.11.2020

## ಸುತ್ತೋಲೆ

**ವಿಷಯ:** 2020-21 ನೇ ಸಾಲಿನ ಶೈಕ್ಷಣಿಕ ತರಗತಿಗಳನ್ನು ಪ್ರಾರಂಭಿಸುವ ಸಂಬಂಧ Sanitizer, Sanitizer stand, Thermal scanner, Pulse Oximeter ವ್ಯವಸ್ಥೆ ಕಲ್ಪಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಇಡಿ 334 ಯುಎನ್‌ಇ 2020, ದಿನಾಂಕ: 09.11.2020.

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1) ರ ಸರ್ಕಾರದ ಆದೇಶದಲ್ಲಿ ದಿನಾಂಕ:17.11.2020 ರಿಂದ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು/ಖಾಸಗಿ ವಿಶ್ವವಿದ್ಯಾಲಯಗಳು/ ಸರ್ಕಾರಿ/ ತಾಂತ್ರಿಕ/ ಡಿಪ್ಲೊಮೊ/ ಅನುದಾನ/ ಅನುದಾನ ರಹಿತ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದ್ದು, ಕೇಂದ್ರ ಸರ್ಕಾರದ University Grant Commission ನೀಡಿರುವ ಮಾರ್ಗಸೂಚಿಯಂತೆ ಶೈಕ್ಷಣಿಕ ಸಂಸ್ಥೆಗಳೂ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾರ್ಗಸೂಚಿಯನ್ನು ನೀಡಿ, ಸದರಿ ಮಾರ್ಗಸೂಚಿಯನ್ನು ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ/ ತಾಂತ್ರಿಕ/ ಡಿಪ್ಲೊಮೊ/ ಅನುದಾನಿತ/ ಅನುದಾನ ರಹಿತ ಕಾಲೇಜುಗಳ ಹಾಗೂ ವಿಶ್ವವಿದ್ಯಾಲಯಗಳು/ ಖಾಸಗಿ ವಿಶ್ವವಿದ್ಯಾಲಯಗಳು ಪಾಲಿಸಲು ಆದೇಶಿಸಲಾಗಿದೆ.

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸುವ ಸಂಬಂಧ ಕೋವಿಡ್-19 ಹರಡದಂತೆ ಮುಂಜಾಗೃತೆ ವಹಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

1. ಕಾಲೇಜಿನ ಸಂಪೂರ್ಣ ಕಟ್ಟಡ, ಆವರಣಗಳನ್ನು Sanitize ಮಾಡಿಸುವುದು.
2. ಕಾಲೇಜಿನ ವಿದ್ಯಾರ್ಥಿ, ಬೋಧಕರ ಮತ್ತು ಬೋಧಕೇತರ ಉಪಯೋಗಕ್ಕಾಗಿ Sanitizer stand with Sanitizer ವ್ಯವಸ್ಥೆ ಕಲ್ಪಿಸುವುದು.
3. Thermal scanner, & Pulse Oximeter ಖರೀದಿಸಿ ಉಪಯೋಗಿಸುವುದು.

2020-21 ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶೈಕ್ಷಣಿಕ ತರಗತಿಗಳನ್ನು 17ನೇ ನವೆಂಬರ್ 2020 ರಿಂದ ಪ್ರಾರಂಭಿಸುವ ಸಲುವಾಗಿ ಪ್ರಾಥಮಿಕ ಕ್ರಮವಾಗಿ ಪ್ರತಿ ಕಾಲೇಜಿಗೆ 500 ವಿದ್ಯಾರ್ಥಿಗಳಿಗೆ Sanitizer stand & Sanitizer, Thermal scanner, Pulse Oximeter ಹೊಂದಿದ ಒಂದು ಯೂನಿಟ್ ರಂತೆ ಪ್ರತಿ ಕಾಲೇಜಿಗೆ ಗರಿಷ್ಟ 03 ಯೂನಿಟ್‌ಗಳನ್ನು ಖರೀದಿಸಲು ಅನುಮತಿ ನೀಡಿದೆ.

2020-21 ನೇ ಸಾಲಿನಲ್ಲಿ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಇತರೆ ಪಠ್ಯೇತರ ಚಟುವಟಿಕೆಗಳನ್ನು ಹಮ್ಮಿಕೊಳ್ಳದಿರಲು ಮಾರ್ಗಸೂಚಿಯಲ್ಲಿ ಸೂಚಿಸಿರುವುದರಿಂದ ಪ್ರಸಕ್ತ ವರ್ಷದಲ್ಲಿ ಸಂಗ್ರಹಿಸಿದ ಅರೆ ಸರ್ಕಾರಿ ಶುಲ್ಕಗಳಾದ ಸಾಂಸ್ಕೃತಿಕ, ವಾರ್ಷಿಕ ಸಂಚಿಕೆ, ರೆಡ್ ಕ್ರಾಸ್ ಮತ್ತು ಸಿ.ಡಿ.ಎಫ್ ನ ಮೊತ್ತವನ್ನು ಬಳಸಿಕೊಂಡು ಕೆ.ಪಿ.ಟಿ.ಟಿ ನಿಯಮಾನುಸಾರ ಖರೀದಿಸಿ, ಉಪಯೋಗಿಸಲು ಆದೇಶಿಸಲಾಗಿದೆ.

ಕೋವಿಡ್ ಮಾರ್ಗಸೂಚಿಯಲ್ಲಿ ಪ್ರಸ್ತಾಪಿಸಿರುವ **ಪೋಷಕರ ಒಪ್ಪಿಗೆ ಪತ್ರದ** ನಮೂನೆಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ್ದು, ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದೆ.

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ**

**ಇವರಿಗೆ:**

1. **ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.**
2. **ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲಬುರಗಿ – ಅಗತ್ಯ ಕ್ರಮಕ್ಕಾಗಿ.**

**ಪ್ರತಿಯನ್ನು :**

1. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ,ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.
2. ಕಛೇರಿ ಪ್ರತಿ

# ಒಪ್ಪಿಗೆ ಪತ್ರ

## (Consent Letter)

| | | |
|---|---|---|
| 01 | ವಿದ್ಯಾರ್ಥಿಯ ಹೆಸರು | |
| 02 | ತಂದೆಯ/ ತಾಯಿಯ/ ಪೋಷಕರ ಹೆಸರು | |
| 03 | ಕಾಲೇಜಿನ ಹೆಸರು | |
| 04 | ಸೆಮಿಸ್ಟರ್ ಸಂಖ್ಯೆ | |
| 05 | ಕೋರ್ಸ್ ಹೆಸರು | |
| 06 | ವಿದ್ಯಾರ್ಥಿಯ ಮೊಬೈಲ್ ಸಂಖ್ಯೆ | |
| 07 | ಪೋಷಕರ ಮೊಬೈಲ್ ಸಂಖ್ಯೆ | |
| 08 | ತಂದೆಯ/ ತಾಯಿಯ/ ಪೋಷಕರ ವಿಳಾಸ | |

ನನ್ನ ಮಗ/ ಮಗಳಾದ ________________________________ ಇವರನ್ನು ಕಾಲೇಜು ನಡೆಸುವ ಭೌತಿಕ/ ಸಂಪರ್ಕ ತರಗತಿಗಳಿಗೆ ಕಳುಹಿಸಲು ಈ ಮೂಲಕ ಒಪ್ಪಿರುತ್ತೇನೆ. ತರಗತಿಗೆ ಹಾಜರಾಗುವ ಸಮಯದಲ್ಲಿ ಸರ್ಕಾರ/ ಕಾಲೇಜು ವಿಧಿಸಿರುವ ಮಾರ್ಗಸೂಚಿಗಳನ್ನು ಸಂಪೂರ್ಣವಾಗಿ ಪಾಲಿಸುವ ಬಗ್ಗೆ ನನ್ನ ಮಗ/ ಮಗಳಿಗೆ ತಿಳುವಳಿಕೆ ನೀಡಿರುತ್ತೇನೆ.

ಕಾಲೇಜಿನಲ್ಲಿ ಎಲ್ಲಾ ವೇಳೆಯಲ್ಲೂ ಸರಿಯಾಗಿ ಮಾಸ್ಕ್ ಧರಿಸಿರುವುದು, ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವುದು, ಶುಚಿತ್ವ ಪಾಲಿಸುವುದು, ಕೋವಿಡ್ ಲಕ್ಷಣ ಕಂಡುಬಂದ ತಕ್ಷಣ ತರಗತಿ ಪ್ರತಿನಿಧಿ/ ಮೇಲ್ವಿಚಾರಕರು/ ಪ್ರಾಂಶುಪಾಲರ ಗಮನಕ್ಕೆ ತರುವುದು ಇತ್ಯಾದಿ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಬಗ್ಗೆ ನನ್ನ ಮಗ/ ಮಗಳಿಗೆ ಮನವರಿಕೆ ಮಾಡಿಕೊಟ್ಟಿರುತ್ತೇನೆ.

ವಿದ್ಯಾರ್ಥಿಯ ಸಹಿ

ತಂದೆಯ/ ತಾಯಿಯ/ ಪೋಷಕರ ಸಹಿ